ದಿನಾಂಕಃ 20.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ 2 ಮತ್ತು 3 ನೇ ಪ್ರತಿವಾದಿಯರ ಪರ ಶ್ರೀ.ಎಮ್.ಎಸ್. ಬಿ ವಕೀಲರಿಂದಃ</u>**

ನನ್ನ ಮದುವೆಯಾಗಿ 40 ವರ್ಷಗಳು ಆಗಿರುತ್ತವೆ. ಸೌದತ್ತಿ ತಾಲ್ಲೂಕಿನ ಕರಿಕಟ್ಟಿ ಗ್ರಾಮದಲ್ಲಿ ನನ್ನ ಮದುವೆಯಾಗಿರುತ್ತದೆ. ನನ್ನ ಗಂಡನ ಕುಟುಂಬಕ್ಕೆ ಜಮೀನುಗಳು ಇರುವುದಿಲ್ಲ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಖಾಯಂ ತೇರಿಖವಾಗಿ ಕರಿಕಟ್ಟಿ ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದರೆ ಸಾಕ್ಷಿಯು ನನ್ನ ತಂದೆ-ತಾಯಿ ನನ್ನನ್ನು ಹಾಗೂ ನನ್ನ ಗಂಡನನ್ನು ತವರು ಮನೆಯಲ್ಲಿಯೇ ಇಟ್ಟುಕೊಂಡಿದ್ದು, ನಾನು ನನ್ನ ಗಂಡ, ಮಕ್ಕಳೊಂದಿಗೆ ಇಲ್ಲಿಯೇ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಆಧಾರ ಕಾರ್ಡು, ರೇಶನ್ ಕಾರ್ಡು ಹಾಗೂ ಚುನಾವಣಾ ಗುರುತಿನ ಚೀಟಿಗಳು ಗೋಕಾಕದಲ್ಲಿಯೇ ಇರುತ್ತವೆ. ನಾನು ಮದುವೆಯಾದಾಗಿನಿಂದ ಕರಿಕಟ್ಟಿ ಗ್ರಾಮದಲ್ಲಿ ವಾಸವಾಗಿದ್ದರೂ ಸಹ ಪ್ರಕರಣಕ್ಕೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಎಷ್ಟು ಆಸ್ತಿಗಳ ಮೇಲೆ ಪ್ರಸ್ತುತ ಪ್ರಕರಣವನ್ನು ಹೂಡಿದ್ದಿರಿ? ಎಂದರೆ ಸಾಕ್ಷಿಯು ಕೆಮ್ಮನಕೋಲದಲ್ಲಿರುವ 06 ಎಕರೆ ಜಮೀನು, ಮಣಿಕಟ್ಟಿ ಗ್ರಾಮದಲ್ಲಿರುವ 02 ಎಕರೆ ಜಮೀನು, ಕರಿಕಟ್ಟಿ ಗ್ರಾಮದಲ್ಲಿರುವ ಒಂದು ನಿವೇಶನ, ಗೋಕಾಕದಲ್ಲಿರುವ ಮೂರು ಮನೆಗಳು ಹಾಗೂ ಬ್ಯಾಂಕಿನಲ್ಲಿರುವ 20 ತೊಲಾ ಬಂಗಾರ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ದಾವಾ ಆಸ್ತಿಗಳ ಸರ್ವೆ ನಂಬರ, ಮನೆ ನಂಬರ ಹಾಗೂ ಅವುಗಳ ಚಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ಆ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ನಿಜ. ಆದ್ದರಿಂದ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ದಾವಾ ಆಸ್ತಿಗಳ ಚಕ್ಕುಬಂದಿಯನ್ನು ಬರೆಸಿರುವುದಿಲ್ಲ ಎಂದರೆ ನಿಜ. ದಾವಾ ಆಸ್ತಿಗಳ ಪೈಕಿ 20 ತೊಲಾ ಬಂಗಾರಗೋಕಾಕದ ಸಿಂಡಿಕೇಟ್ ಬ್ಯಾಂಕಿನ ಲಾಕರ್ ನಲ್ಲಿ ನಮ್ಮ ತಂದೆ 5-6 ವರ್ಷಗಳ ಹಿಂದೆ ಇಟ್ಟಿರುತ್ತಾರೆ. ಸದರಿ ಲಾಕರ್ ನನ್ನ ತಂದೆಯ ಹೆಸರಿಗೆ ಇರುತ್ತದೆ.

20 ತೊಲಾ ಬಂಗಾರದ ಪೈಕಿ 04 ತೊಲಾ ಪಾಟ್ಲಿ, 03 ತೊಲೆ ಬಿಲ್ವರ , 04 ತೊಲೆಯ ಮಂಗಳಸೂತ್ರ , ಒಂದೂವರೆ ತೊಲೆಯ 02 ಸಾಕಳಿ, 02 ತೊಲೆಯ ನೆಕ್ಲೆಸ್ ಹಾಗೂ ಉಳಿದ ಸಾಮಾನುಗಳು ಸುತ್ತುಂಗರ ಇರುತ್ತವೆ. ಸದರಿ ಬಂಗಾರದ ಸಾಮಾನುಗಳ ಬಗ್ಗೆ ದಾವೆಯಲ್ಲಿ ಹೇಳಿ ಬರೆಸಿರುತ್ತೇನೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಿಂಡಿಕೇಟ್ ಬ್ಯಾಂಕನಲ್ಲಿ ಲಾಕರ್ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೀರಾ? ಎಂದರೆ ಸಾಕ್ಷಿಯು ಆ ಬಗ್ಗೆ ದಾಖಲೆ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ ಆ ಬಗ್ಗೆ ಹೇಳುತ್ತಿದ್ದೀರಿ? ಎಂದರೆ ಸಾಕ್ಷಿಯು ನಮ್ಮ ತಂದೆ ಹೇಳಿದ್ದರು ಎಂದು ನುಡಿಯುತ್ತಾರೆ. ಸದರಿ ವಿಷಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 20 ತೊಲಾ ಬಂಗಾರವನ್ನು ಸಿಂಡಿಕೇಟ ಬ್ಯಾಂಕಿನ ಲಾಕರ್ ನಲ್ಲಿ ಇಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ತೋರಿಸಿರುವ ದಾವಾ ಆಸ್ತಿಗಳ ಮೌಲ್ಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳ ಪೈಕಿ 06 ಎಕರೆ ಜಮೀನು ನಮ್ಮ ಅಜ್ಜನಿಂದ ನಮ್ಮ ತಂದೆಗೆ ಬಂದಿದ್ದು, ಉಳಿದ ಆಸ್ತಿಗಳನ್ನು ನಮ್ಮ ತಂದೆ ಸಂಪಾದಿಸಿರುತ್ತಾರೆ. 06 ಎಕರೆ ಜಮೀನು ನಮ್ಮ ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಯಾವ ಆಸ್ತಿಯು ಯಾರ ಹೆಸರಿಗೆ, ಯಾವ ನಾತೆಯಿಂದ ದಾಖಲು ಇರುತ್ತದೆ ಎಂದರೆ ಸಾಕ್ಷಿಯು ನಮ್ಮ ತಂದೆಯ ಹೆಸರಿಗೆ ಇದ್ದು, ಅವರು ತೀರಿಕೊಂಡ ನಂತರ 3 ನೇ ಪ್ರತಿವಾದಿ ನಮ್ಮ ಜೊತೆ ಜಗಳ ತೆಗೆದು ಮನೆಯಿಂದ ಹೊರಗೆ ಹಾಕುತ್ತಿದ್ದಾನೆ ಎಂದು ನುಡಿಯುತ್ತಾರೆ. ದಾವೆಯನ್ನು ಹಾಕುವ ಕಾಲಕ್ಕೆ ಎಲ್ಲಾ ಆಸ್ತಿಗಳು ನಮ್ಮ ತಂದೆಯ ಹೆಸರಿಗೆ ಇದ್ದವು. ಸಾಕ್ಷಿ ಮುಂದುವರೆದು 3 ನೇ ಪ್ರತಿವಾದಿ ತನ್ನ ಹೆಸರಿಗೆ ಇರುತ್ತವೆ ಎಂದು ಹೇಳುತ್ತಿದ್ದು, ಆದರೆ

ನಾನು ದಾಖಲೆಗಳನ್ನು ನೋಡಿರುವುದಿಲ್ಲ. ನಾನು ಯಾವ ದಾಖಲೆಗಳನ್ನು ಪರಿಶೀಲಿಸದೇ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಕೆಮ್ಮನಕೋಲ ಗ್ರಾಮದಲ್ಲಿರುವ ಜಮೀನು ನಮ್ಮ ಅಜ್ಜನಿಂದ ಬಂದಿರುತ್ತವೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಯರು ಒಟ್ಟು ಕುಟುಬಂದ ಸದಸ್ಯರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು 3 ನೇ ಪ್ರತಿವಾದಿಯೊಂದಿಗೆ ಯಾವ ಕಾಲಕ್ಕೂ ಜಂಟಿ ಕುಟುಂಬದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಹಕ್ಕು, ಹಿತಾಸಕ್ತಿ ಇರದೇ ಇದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ಸಲ್ಲಿಸಲು ನನಗೆ ಯಾವುದೇ ವ್ಯಾಜ್ಯ ಕಾರಣ ಉದ್ಭವಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ

<u>1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ, ನ್ಯಾಯಾಲಯ ಗೋಕಾಕ</u>

<u>ಅಸಲ ದಾವಾ ನಂ: 726/2023</u>

**<u>ದಿನಾಂಕಃ . 20.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

ಪಿ.ಡಬ್ಲು.2

| | |
|---|---|
| ಹೆಸರು | ರವೀಂದ್ರ ಬೋಪೆ |
| ತಂದೆಯ ಹೆಸರು | ಯಲ್ಲಪ್ಪಾ |
| ವಯಸ್ಸು | 61 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ | ಸವದತ್ತಿ |

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎಸ್ . ಎಮ್ ಬಿ ವಕೀಲರಿಂದಃ</u>**

ನಾನು ಈ ಪ್ರಕರಣದಲ್ಲಿ ವಾದಿ ಪರ ಸಾಕ್ಷ್ಯ ನುಡಿಯುತ್ತಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಹಾಜರು ಪಡಿಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ.

**ಪಾಟೀಸವಾಲುಃ- ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ